# ಯಮರೆ ಗ್ರಾಮ ಪಂಚಾಯಿತಿ ಕಾರ್ಯಾಲಯ

**ಯಮರೆ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562125**

ಕ್ರ.ಸಂಖ್ಯೆ: ಗ್ರಾ.ಪಂ/ಯಮರೆ/89/2024–25 ದಿನಾಂಕ : ದಿನಾಂಕ:11/09/2024

## ನಿರಾಪೇಕ್ಷಣಾ ಪತ್ರ

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಯಮರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಂಪುರ ಗ್ರಾಮದ ಸರ್ವೇ ನಂ ಹಳೇ 27/5 ಹೊಸ ನಂ 27/1 ರಲ್ಲಿ 2 ಎಕರೆ 02 ಗುಂಟೆ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನೆ ಆದೇಶ ಸಂಖ್ಯೆ ALN(A)(S)(SR)189/2012-13 ದಿನಾಂಕ 03/01/2013 ರಂತೆ ಶ್ರೀಮತಿ ಭಾರತಿ, ಮೋಹನ್ ಮತ್ತು ಮನೋಹರ್ ರವರ ಹೆಸರಿಗೆ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆ, ಸೋಂಪುರ ಗ್ರಾಮದ ಸರ್ವೇ ನಂ 27/2 ರಲ್ಲಿ 0 ಎಕರೆ 05 ಗುಂಟೆ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನೆ ಆದೇಶ ಸಂಖ್ಯೆ ALN(A)(S)(SR)358/2011-12 ದಿನಾಂಕ 12/04/2012 ರಂತೆ ಶ್ರೀ ಕೆ ಸಿ ಸೋಮಶೇಖರ್ ಬಿನ್ ಲೇಟ್ ಚೌಡರೆಡ್ಡಿ ರವರ ಹೆಸರಿಗೆ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆ, ಸೋಂಪುರ ಗ್ರಾಮದ ಸರ್ವೇ ನಂ 38/3 ರಲ್ಲಿ 1 ಎಕರೆ 16 ಗುಂಟೆ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನೆ ಆದೇಶ ಸಂಖ್ಯೆ ALN(ASH)(SR)129/2016-17 ದಿನಾಂಕ 18/08/2017 ರಂತೆ ಶ್ರೀ ಮುನಿರೆಡ್ಡಿ ಬಿನ್ ಲೇಟ್ ಮುನಿಶಾಮಿರೆಡ್ಡಿ ರವರ ಹೆಸರಿಗೆ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆ ಒಟ್ಟು 3 ಎಕರೆ 23 ಗುಂಟೆ ಸದರಿ ಜಮೀನನ್ನು **ಸುಯುಗ್ ಕನ್‌ಸ್ಟ್ರಕ್ಷನ್ಸ್ ರವರಿಗೆ ಜಿ.ಡಿ.ಎ ಮತ್ತು ಜಿ.ಪಿ.ಎ ನೀಡಿರುತ್ತಾರೆ, ಸದರಿ ಜಮೀನಿನಲ್ಲಿ ಸುಯುಗ್ ಕನ್‌ಸ್ಟ್ರಕ್ಷನ್ಸ್** ರವರು ವಸತಿ ಸಮುಚ್ಚಯ ನಿರ್ಮಿಸಲು ಉದ್ದೇಶಿಸಿರುತ್ತಾರೆ, ಸದರಿವರು ಉದ್ದೇಶಿಸಿರುವ ವಸತಿ ಸಮುಚ್ಚಯ ಯೋಜನೆಯಲ್ಲಿ ಸದರಿಯವರು ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ಗ್ರಾಮ ಪಂಚಾಯಿತಿ ವತಿಯಿಂದ ಯಾವುದೇ ಅಕ್ಷೇಪಣೆ ಇರುವುದಿಲ್ಲ.

ಸಕ್ಷಮ ಪ್ರಾಧಿಕಾರದ ಅನುಮೋದಿತ ನಕ್ಷೆಯಂತೆ ಉದ್ದೇಶಿತ ವಸತಿ ಸಮುಚ್ಚಯ ಕಾಮಗಾರಿಗಳು ಪೂರ್ಣಗೊಂಡ ನಂತರ ಗ್ರಾಮ ಪಂಚಾಯತಿಗೆ ಕಟ್ಟಬೇಕಾದ ವಿವಿಧ ತೆರಿಗೆಗಳನ್ನು ಹಾಗೂ ಕುಡಿಯುವ ನೀರಿಗೆ ಸಂಬಂಧಪಟ್ಟಂತಹ ಹಣವನ್ನು ಸಂದಾಯ ಮಾಡಿದ ನಂತರ ಅವಶ್ಯವಿದಲ್ಲಿ ಈಗಿರುವ ನೀರಿನ ಮೂಲಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದೆಂದು ಈ ಮೂಲಕ ದೃಢೀಕರಿಸುತ್ತೇವೆ. ಕುಡಿಯುವ ನೀರಿನ ಸಮಸ್ಯೆಗಳು ಉದ್ಭವಿಸಿದಲ್ಲಿ ಸರಬರಾಜಿನಲ್ಲಿ ವ್ಯತ್ಯಾಸ ಹಾಗೂ ಸಂಪೂರ್ಣ ಸ್ಥಗಿತಗೊಳಿಸಲಾಗುವುದೆಂದು ಕೂಡ ತಿಳಿಯತಕ್ಕದು ಹಾಗೂ ಸದರಿ ಜಮೀನಿಗೆ ಬೆಂಗಳೂರು–ಸರ್ಜಾಪುರ ಮುಖ್ಯ ರಸ್ತೆಯಿಂದ ರಸ್ತೆ ಸಂಪರ್ಕವು ಸಹ ಇರುತ್ತದೆ.

ಈ ವಸತಿ ಸಮುಚ್ಚಯಕ್ಕೆ ಕುಡಿಯುವ ನೀರಿನ ಸಂಪರ್ಕ ನೀಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಈ ಮೂಲಕ ಸಂಬಂಧಪಟ್ಟವರಿಗೆ ನಿರಾಪೇಕ್ಷಣಾ ಪತ್ರವನ್ನು ನೀಡಲಾಗಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಯಮರೆ ಗ್ರಾಮ ಪಂಚಾಯಿತಿ
ಸರ್ಜಾಪುರ ಹೋ|| ಆನೇಕಲ್ ತಾ||
[illegible]